ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 339 ಎಫ್‌ಡಬ್ಲ್ಯೂಎಲ್ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 16.09.2016.

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬೆಂಗಳೂರು.

ಇವರಿಗೆ:

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂ ದಾಖಲೆಗಳು), ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು.
4. ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು.
5. ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಕೊಡಗು.
6. ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.
7. ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
8. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು
9. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಕೃಷಿ ಭವನ, 2ನೇ ಮಹಡಿ, ಬೆಂಗಳೂರು.
10. ಉಪ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ/ವನ್ಯಜೀವಿ), ಮಡಿಕೇರಿ ವಿಭಾಗ, ಮಡಿಕೇರಿ.
11. ಉಪ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ/ವನ್ಯಜೀವಿ), ವಿರಾಜಪೇಟೆ ವಿಭಾಗ,ಕೊಡಗು.
12. ಉಪ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ/ವನ್ಯಜೀವಿ), ಮೈಸೂರು ವಿಭಾಗ, ಮೈಸೂರು.
13. ಉಪ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ/ವನ್ಯಜೀವಿ), ಹುಣಸೂರು ವಿಭಾಗ, ಮೈಸೂರು.
14. ಉಪ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ/ವನ್ಯಜೀವಿ), ಚಾಮರಾಜನಗರ ವಿಭಾಗ, ಚಾಮರಾಜನಗರ.

3168
27/9/16

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಹುಣಸೂರು ವನ್ಯಜೀವಿ ವಿಭಾಗ, ಹುಣಸೂರು
6 OCT 2016
ವ್ಯವಸ್ಥಾಪಕ ಉ.ಅ.ಸಂ

ವಿಷಯ: ನಾಗರಹೊಳೆ (ರಾಜೀವ್‌ಗಾಂಧಿ) ರಾಷ್ಟ್ರೀಯ ಉದ್ಯಾನವನದ ಒಳಗೆ ವಾಸಿಸುತ್ತಿರುವ ಗಿರಿಜನ ಕುಟುಂಬಗಳು ಮತ್ತಿತರರನ್ನು ಪುನರ್ವಸತಿಗೊಳಿಸುವ ಕುರಿತು ನಡೆದ ಸಭೆಯ ನಡವಳಿಯ ಬಗ್ಗೆ.

*****

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06.09.2016ರಂದು ಅಪರಾಹ್ನ 3.30 ಗಂಟೆಗೆ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ಆದೇಶ ದಿನಾಂಕ: 03.04.2009ರ ಆದೇಶದನ್ವಯ ರಚಿಸಿದ ಸಮಿತಿಯ ಅಧ್ಯಕ್ಷರಾದ ಪ್ರೊ. ಮುಜಾಫರ್ ಆಸಾದಿರವರ ಅಂತಿಮ ವರದಿಯಂತೆ ನಾಗರಹೊಳೆ (ರಾಜೀವ್‌ಗಾಂಧಿ) ರಾಷ್ಟ್ರೀಯ ಉದ್ಯಾನವನದ ಒಳಗೆ ವಾಸಿಸುತ್ತಿರುವ ಗಿರಿಜನ ಕುಟುಂಬಗಳ ಪುನರ್ವಸತಿಗೆ ಸಂಬಂಧಿಸಿದಂತೆ ಚರ್ಚಿಸಲು ನಡೆದ ಸಭೆಯ ನಡವಳಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ಅರಣ್ಯ ಸಂರಕ್ಷಣಾಧಿಕಾರಿ
ನಿರ್ದೇಶಕರ ಕಛೇರಿ, ರಾಜೀವ್‌ಗಾಂಧಿ
ರಾಷ್ಟ್ರೀಯ ಉದ್ಯಾನವನ, ಹುಣಸೂರು
26 SEP 2016

ನಿಮ್ಮ ವಿಶ್ವಾಸಿ,

(ಯು.ಹೆಚ್. ನಾರಾಯಣಸ್ವಾಮಿ) 16.09.16
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪ್ರತಿ:

225

ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದೊಳಗೆ ವಾಸಮಾಡುತ್ತಿದ್ದ ಗಿರಿಜನರ ಪುನರ್‌ವಸತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಪ್ರೊ. ಮುಜಾಫರ್ ಅಸ್ಸಾದಿ ಇವರ ನೇತೃತ್ವದಲ್ಲಿ ರಚಿಸಿದ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:**06.09.2016** ರಂದು ನಡೆದ ಸಭೆಯ ನಡವಳಿಗಳು.

*-*-*-*-*

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಲಗತ್ತಿಸಿದೆ.

1. ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದೊಳಗೆ ವಾಸಿಸುತ್ತಿರುವ ಗಿರಿಜನರ ಪುನರ್‌ವಸತಿಗೆ ಸಂಬಂಧಿಸಿದಂತೆ ದಿನಾಂಕ:23.07.2016ರಂದು ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಲಾಯಿತು. ಮುಂದುವರಿದು ದಿನಾಂಕ:17.08.2016ರಂದು ಈ ಸಂಬಂಧದಲ್ಲಿ ನಡೆದ ಸಭೆಯಲ್ಲಿ ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಾಸವಾಗಿರುವ ಒಟ್ಟು 1,107 ಗಿರಿಜನರ ಕುಟುಂಬದವರಿಗೆ ಪುನರ್‌ವಸತಿ ಕಲ್ಪಿಸಲು ಜಮೀನುಗಳನ್ನು ಗುರುತಿಸಿ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಹಾಗೂ ಈಗಾಗಲೇ ದಿನಾಂಕ:23.07.2016ರಂದು ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಐತಿಹಾಸಿಕವಾಗಿ ಸ್ಥಳಾಂತರಗೊಂಡಿರುವ ಒಟ್ಟು 3418 ಗಿರಿಜನ ಕುಟುಂಬಗಳ ಬಗ್ಗೆ ಅಧ್ಯಯನ ನಡೆಸಿ, ಪುನರ್‌ವಸತಿ ಪ್ಯಾಕೇಜ್‌ಗಳಡಿ ಸೌಲಭ್ಯಗಳನ್ನು ನೀಡಲು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಚರ್ಚಿಸಲಾಗಿತ್ತು. ಈ ಸಂಬಂಧದಲ್ಲಿ ಪುನರ್‌ವಸತಿಗೆ ಜಮೀನುಗಳನ್ನು ಗುರುತಿಸಿ ತ್ವರಿತವಾಗಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿತ್ತು ಹಾಗೂ ಐತಿಹಾಸಿಕವಾಗಿ ಸ್ಥಳಾಂತರಗೊಂಡಿರುವ ಗಿರಜನ ಕುಟುಂಬಗಳಿಗೆ ಪುನರ್‌ವಸತಿ ಪ್ಯಾಕೇಜ್ ಅಡಿಯಲ್ಲಿ ಸೌಲಭ್ಯಗಳನ್ನು ನೀಡುವ ಬಗ್ಗೆ ಸಹ ನಿರ್ದಿಷ್ಟವಾದ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ನಿರ್ಣಯಿಸಲಾಗಿತ್ತು.

2. ದಿನಾಂಕ:23.07.2016 ಹಾಗೂ ದಿನಾಂಕ:17.08.2016ರಂದು ನಡೆದಿರುವ ಸಭೆಗಳಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ವಯ ಗಿರಿಜನರ ಪುನರ್‌ವಸತಿಗಾಗಿ ಜಮೀನನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸಲಾಯಿತು. ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈ ಹಿಂದೆ ಗುರುತಿಸಲಾಗಿದ್ದ ಡೀಮ್ಡ್ ಫಾರೆಸ್ಟ್ ವಿಸ್ತೀರ್ಣದಲ್ಲಿ ಸಾಕಷ್ಟು ಕಡಿಮೆಯಾಗಿದ್ದು, ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಿಂದ ಕೈಬಿಟ್ಟಿರುವ ಜಮೀನನ್ನು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಗಿರಿಜನ ಕುಟುಂಬಗಳ ಪುನರ್‌ವಸತಿಗಾಗಿ ಗುರುತಿಸುವ ಬಗ್ಗೆ ಚರ್ಚಿಸಲಾಯಿತು.

3. ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಗಿರಿಜನ ಕುಟುಂಬಗಳ ಪುನರ್‌ವಸತಿಗಾಗಿ ಗುರುತಿಸಲಾಗಿರುವ ನಿರ್ಧಿಷ್ಟ ಜಮೀನುಗಳ ಬಗ್ಗೆ ಪರಿಶೀಲಿಸಲಾಯಿತು. ಮೈಸೂರು,

ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಗಿರಿಜನರ ಕುಟುಂಬಗಳ ಪುನರ್‌ವಸತಿಗಾಗಿ ಗುರುತಿಸಲಾಗಿರುವ ಜಮೀನುಗಳಿಗೆ ಸಂಬಂಧಿಸಿದಂತೆ ವಿವರವಾಗಿ ಚರ್ಚಿಸಿ ಈ ಕೆಳಕಂಡಂತೆ ಕ್ರಮ ಜರುಗಿಸಲು ನಿರ್ಣಯಿಸಲಾಯಿತು:-

(ಅ) ಕೊಡಗು ಜಿಲ್ಲೆಯ ವಿರಾಜಪೇಟೆ ವಿಭಾಗದ ಮಾವುಕಲ್ ಮೀಸಲು ಅರಣ್ಯದ ತಿತಿಮತಿ ವಲಯ ವ್ಯಾಪ್ತಿಯಲ್ಲಿ ಭದ್ರಗೋಳ ಗ್ರಾಮದಲ್ಲಿ ಗುರುತಿಸಲಾಗಿರುವ ಸರ್ವೆ ನಂ.303ರಲ್ಲಿನ 56 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಅರಣ್ಯ ವಿಮೋಚನೆ ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ತ್ವರಿತವಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

(ಆ) ಮೈಸೂರು ಜಿಲ್ಲೆಯ ಹುಣಸೂರು ವಿಭಾಗದ ಪಂಚವಳ್ಳಿಯ ಗಂಧದ ಪ್ಲಾಂಟೇಷನ್‌ನಲ್ಲಿ ಲಭ್ಯವಿರುವ 312 ಎಕರೆ ಜಮೀನನ್ನು ಗಿರಿಜನರ ಪುನರ್‌ವಸತಿಗಾಗಿ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಅರಣ್ಯ ವಿಮೋಚನೆ ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ತ್ವರಿತವಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

(ಇ) ಕೊಡಗು ಜಿಲ್ಲೆಯ ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸೋಮವಾರಪೇಟೆ ಮತ್ತು ಶನಿವಾರಸಂತೆ ವಲಯಗಳ ವ್ಯಾಪ್ತಿಯ ಒಟ್ಟು 7 ಪ್ರದೇಶಗಳಲ್ಲಿ 753 ಎಕರೆ ಜಮೀನನ್ನು ಗುರುತಿಸಿದ್ದು, ಈ ಜಮೀನು ಗಿರಿಜನರ ಪುನರ್‌ವಸತಿಗೆ ಸೂಕ್ತವಾಗಿದ್ದಲ್ಲಿ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಅರಣ್ಯ ವಿಮೋಚನೆ ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ತ್ವರಿತವಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಲಾಯಿತು.

(ಈ) ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಮಡಿಕೇರಿ ರಸ್ತೆಗೆ ಹತ್ತಿರದಲ್ಲಿರುವ ಪ್ರದೇಶದಲ್ಲಿ ನಿರ್ದೇಶಕರು, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ ಇವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ಸೂಕ್ತವಾದ ಜಮೀನನ್ನು ಗುರುತಿಸಿ ನಿರ್ದಿಷ್ಟ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು. ಮೈಸೂರು ಜಿಲ್ಲೆಯಲ್ಲಿ ಸುಮಾರು 9276 ಹೆಕ್ಟೇರ್ ಡೀಮ್ಡ್ ಅರಣ್ಯ ಲಭ್ಯವಿದ್ದು, ಇದನ್ನು ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಮೋಜಣಿ ನಡೆಸಿ, ಸೂಕ್ತ ಜಮೀನನ್ನು ಪುನರ್‌ವಸತಿ ಉದ್ದೇಶಕ್ಕಾಗಿ ಗುರುತಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕೆಂದು ನಿರ್ಣಯಿಸಲಾಯಿತು.

(ಉ) ಕೊಡಗು ಜಿಲ್ಲೆ ವಿರಾಜಪೇಟೆ ವಿಭಾಗದ ಶ್ರೀಮಂಗಲ ಹೋಬಳಿ ಪಶ್ಚಿಮ ನೆಮ್ಮಾಲೆ ಗ್ರಾಮದ ಸರ್ವೆ ನಂ.1/1ಪಿ1ರಲ್ಲಿ ಲಭ್ಯವಿರುವ 320 ಎಕರೆ ಜಮೀನು ಗಿರಿಜನರ ಪುನರ್‌ವಸತಿಗೆ ಸೂಕ್ತವೇ ಎಂಬ ಬಗ್ಗೆ ಕೊಡಗು ಜಿಲ್ಲಾಧಿಕಾರಿಯವರು ಸ್ಥಳ ಪರಿವೀಕ್ಷಣೆ

ನಡೆಸಿ ಈ ಜಮೀನು ಪುನರ್‌ವಸತಿಗೆ ಸೂಕ್ತವೆನಿಸಿದಲ್ಲಿ ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.

(ಕ್ರಮ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)/ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ/ಮೈಸೂರು ಜಿಲ್ಲೆ/ ನಿರ್ದೇಶಕರು, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು /ಉಪ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ/ವನ್ಯಜೀವಿ) ಮಡಿಕೇರಿ ವಿಭಾಗ/ವಿರಾಜಪೇಟೆ ವಿಭಾಗ/ ಮೈಸೂರು ವಿಭಾಗ/ ಹುಣಸೂರು ವಿಭಾಗ )

4. ಪ್ರೊ.ಮುಜಾಫರ್ ಅಸ್ಸಾದಿರವರ ವರದಿಯಲ್ಲಿ ನಾಗರಹೊಳೆ ಅಭಯಾರಣ್ಯದ ವ್ಯಾಪ್ತಿಯಲ್ಲಿ ಐತಿಹಾಸಿಕವಾಗಿ ಸ್ಥಳಾಂತರಗೊಂಡಿರುವ 3418 ಗಿರಿಜನ ಕುಟುಂಬಗಳಿಗೆ ಸಂಬಂಧಿಸಿದ ಮಾಹಿತಿ/ವಿವರಗಳು ವರದಿಯಲ್ಲಿ ಲಭ್ಯವಿದ್ದು, ಈ ಗಿರಿಜನ ಕುಟುಂಬಗಳು ಮೈಸೂರು ಮತ್ತು ಕೊಡಗು ಜಿಲ್ಲೆಗಳ ವ್ಯಾಪ್ತಿಯಲ್ಲಿ ಸ್ಥಳಾಂತರಗೊಂಡಿರುವುದರಿಂದ ಪರಿಸ್ಥಿತಿಯನ್ನು ಅವಲೋಕಿಸಿ, ಅಗತ್ಯ ಅಧ್ಯಯನ ನಡೆಸಿ, ಈ ಕುಟುಂಬಗಳಿಗೆ ಪುನರ್‌ವಸತಿ ಪ್ಯಾಕೇಜ್ ಸೌಲಭ್ಯ ವಿಸ್ತರಿಸುವ ಅಗತ್ಯತೆ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕೆಂದು ಸೂಚಿಸಲಾಯಿತು. ಈ ಪ್ರಕ್ರಿಯೆಯನ್ನು ಒಂದು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಬೇಕೆಂದು ಸಹ ಸೂಚಿಸಲಾಯಿತು. ಐತಿಹಾಸಿಕವಾಗಿ ಸ್ಥಳಾಂತರಗೊಂಡಿರುವ ಹಾಗೂ ಅಭಯಾರಣ್ಯದ ಹೊರಗೆ ವಾಸಿಸುತ್ತಿರುವ ಗಿರಿಜನ ಕುಟುಂಬಗಳಿಗೆ ಪುನರ್‌ವಸತಿ ಪ್ಯಾಕೇಜ್ ವಿಸ್ತರಿಸುವ ವಿಷಯಗಳನ್ನು/ಪ್ರಸ್ತಾವನೆಗಳನ್ನು ಪರಿಶೀಲಿಸಲು ಮೈಸೂರು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

(1) ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ – ಅಧ್ಯಕ್ಷರು.
(2) ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ – ಸದಸ್ಯರು.
(3) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಜಿಲ್ಲೆ/ ಕೊಡಗು ಜಿಲ್ಲೆ – ಸದಸ್ಯರುಗಳು.
(4) ನಿರ್ದೇಶಕರು, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು – ಸದಸ್ಯರು.
(5) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ) ಮೈಸೂರು/ಹುಣಸೂರು/ಮಡಿಕೇರಿ/ ವಿರಾಜಪೇಟೆ ವಿಭಾಗಗಳು – ಸದಸ್ಯರುಗಳು.
(5) ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ, ಕೊಡಗು ಜಿಲ್ಲೆ – ಸದಸ್ಯರು.
(6) ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ, ಮೈಸೂರು ಜಿಲ್ಲೆ – ಸದಸ್ಯ ಕಾರ್ಯದರ್ಶಿ.

5. ಐತಿಹಾಸಿಕವಾಗಿ ಸ್ಥಳಾಂತರಗೊಂಡಿರುವ ಗಿರಿಜನ ಕುಟುಂಬಗಳಿಗೆ ಪುನರ್‌ವಸತಿ ಪ್ಯಾಕೇಜ್ ವಿಸ್ತರಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಪ್ರಸ್ತಾವನೆಗಳನ್ನು ಈ ಸಮಿತಿಯ ಮೂಲಕವೇ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

(ಕ್ರಮ: ಅರಣ್ಯ ಇಲಾಖೆ/ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ)

6. ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕು ಭೀಮನಹಳ್ಳಿಯಲ್ಲಿ ಗಿರಿಜನರ ಪುನರ್‌ವಸತಿಗಾಗಿ ಪ್ರತಿ ಮನೆಗೆ ರೂ.4.50 ಲಕ್ಷ ವೆಚ್ಚದಲ್ಲಿ 210 ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಆದರೆ ಈ ಅನುದಾನದ ಮಿತಿಯಲ್ಲಿ ಮನೆಗಳಿಗೆ ಎಲೆಕ್ಟ್ರಿಕಲ್ ಸೌಕರ್ಯ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಒದಗಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಲಭ್ಯವಿರುವ ಅನುದಾನದಲ್ಲಿ ಈ ಸೌಲಭ್ಯಗಳನ್ನು ಹೆಚ್ಚುವರಿಯಾಗಿ ಒದಗಿಸಬೇಕಾಗುತ್ತದೆ ಎಂದು ನಿರ್ದೇಶಕರು, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು ಇವರು ತಿಳಿಸಿದರು. ಎಲೆಕ್ಟ್ರಿಕಲ್ ಮತ್ತು ನೀರು ಸರಬರಾಜು ವ್ಯವಸ್ಥೆಗಳಿಗೆ ಪ್ರತ್ಯೇಕ ಅಂದಾಜನ್ನು ತಯಾರಿಸಿ, ಸರ್ಕಾರದ ಅನುಮೋದನೆ ಸಲ್ಲಿಸುವಂತೆ ಸೂಚಿಸಲಾಯಿತು.

**(ಕ್ರಮ: ನಿರ್ದೇಶಕರು, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು)**

7. ಗಿರಿಜನರ ಪುನರ್‌ವಸತಿಗಾಗಿ ಕೇಂದ್ರ ಸರ್ಕಾರವು ಫೆಬ್ರವರಿ 2008ರಲ್ಲಿ ರೂ.10.00 ಲಕ್ಷಗಳ ಪ್ಯಾಕೇಜ್ ಘೋಷಿಸಿದೆ. ಆದ್ದರಿಂದ ಈ ರೂ.10.00 ಲಕ್ಷಗಳ ಪ್ಯಾಕೇಜ್ ಘೋಷಣೆಯಾಗಿ ಸುಮಾರು 08 ವರ್ಷಗಳಿಗಿಂತ ಹೆಚ್ಚು ಅವಧಿಯಾಗಿದೆ. ಹಣದುಬ್ಬರ ಮತ್ತು ಬೆಲೆ ಸೂಚ್ಯಂಕಗಳನ್ನು ಗಮನದಲ್ಲಿಟ್ಟುಕೊಂಡು ಈ ಪುನರ್‌ವಸತಿ ಪ್ಯಾಕೇಜ್ ಮೊತ್ತವನ್ನು ಪ್ರಸ್ತುತದಲ್ಲಿರುವ ರೂ.10.00 ಲಕ್ಷದಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವುದು ಅಗತ್ಯವಾಗಿದೆ. ಆದ್ದರಿಂದ ಈ ಸಂಬಂಧದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಇವರು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಲಾಯಿತು.

**(ಕ್ರಮ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ))**

8. ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿ ಮತ್ತು ಲಕ್ಕಪಟ್ಟಣಗಳಲ್ಲಿ ಗಿರಿಜನರ ಪುನರ್‌ವಸತಿಗಾಗಿ 210 ಮನೆಗಳನ್ನು ನಿರ್ಮಿಸಲಾಗಿದ್ದು, ಭೂಮಿ ಮತ್ತು ಮನೆಗೆ ಸಂಬಂಧಿಸಿದಂತೆ ಪ್ರತ್ಯೇಕ ಖಾತೆಗಳನ್ನು ಸಂಬಂಧಪಟ್ಟ ಗಿರಿಜನರ ಪರವಾಗಿ ಮಾಡಲು ಕಂದಾಯ ಇಲಾಖೆ ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳು ಅಗತ್ಯ ಕ್ರಮ ಜರುಗಿಸಬೇಕಾಗಿದೆ. ಈ ಬಗ್ಗೆ ಸಂಬಂಧಪಟ್ಟವರಿಗೆ ಸೂಚಿಲು ನಿರ್ಣಯಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ/ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು.)**

---

ಸಂಖ್ಯೆ: **ಅಪಜೀ 339 ಎಫ್‌ಡಬ್ಲ್ಯೂಎಲ್ 2014**

(ಟಿ.ಎಂ ವಿಜಯಭಾಸ್ಕರ್) 13/8/16
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ಆದೇಶ ದಿನಾಂಕ: 03.04.2009ರ ಆದೇಶದನ್ವಯ ರಚಿಸಿದ ಸಮಿತಿಯ ಅಧ್ಯಕ್ಷರಾದ ಪ್ರೊ. ಮುಜಾಫಾರ್ ಆಸಾದಿರವರ ಅಂತಿಮ ವರದಿಯಂತೆ ನಾಗರಹೊಳೆ (ರಾಜೀವ್‌ಗಾಂಧಿ) ರಾಷ್ಟ್ರೀಯ ಉದ್ಯಾನವನದ ಒಳಗೆ ವಾಸಿಸುತ್ತಿರುವ ಗಿರಿಜನ ಕುಟುಂಬಗಳ ಪುನರ್ವಸತಿಗೆ ಸಂಬಂಧಿಸಿದಂತೆ ಈ ಕೆಳಕಂಡ ವಿಷಯಗಳ ಕುರಿತು ಚರ್ಚಿಸಲು ದಿನಾಂಕ: 23.07.2016 ಮತ್ತು 17.08.2016ರಂದು ಜರುಗಿದ ಸಭೆಗಳ ಮುಂದುವರಿಕೆಯಾಗಿ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿನಾಂಕ: 06.09.2016ರಂದು ಅಪರಾಹ್ನ 3.30 ಗಂಟೆಗೆ ನಡೆದ ಸಭೆಯಲ್ಲಿ ಹಾಜರಾದ ಅಧಿಕಾರಿಗಳ ಪಟ್ಟಿ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಸಹಿ |
|---|---|---|
| 1. | ಶ್ರೀ ಟಿ.ಎಂ. ವಿಜಯ್ ಭಾಸ್ಕರ್, ಭಾಆಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ<br>ಅಪಜೀ ಇಲಾಖೆ. | [signature] |
| 2. | ಶ್ರೀ ವಿಜಯಕುಮಾರ್ ಗೋಗಿ, ಭಾಅಸೇ.,<br>ಸರ್ಕಾರದ ಕಾರ್ಯದರ್ಶಿ(ಅರಣ್ಯ)<br>ಅಪಜೀ ಇಲಾಖೆ. | [signature] 6/9/2016 |
| 3. | ಶ್ರೀ ಆರ್.ಎಸ್. ಸುರೇಶ್, ಭಾಅಸೇ.,<br>ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ<br>(ಅರಣ್ಯ ಪಡೆ ಮುಖ್ಯಸ್ಥರು). | |
| 4. | ಶ್ರೀ ಬಿ.ಜೆ. ಹೊಸಮಠ, ಭಾಅಸೇ.,<br>ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ<br>(ವನ್ಯಜೀವಿ). ಪರವಾಗಿ | [signature] 6/9 |
| 5. | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ<br>(ಭೂದಾಖಲೆಗಳು) | |
| 6. | ~~ಮುಖ್ಯ~~ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು,<br>ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು. | [signature] |
| 7. | ಜಿಲ್ಲಾಧಿಕಾರಿ,<br>ಕೊಡಗು ಜಿಲ್ಲೆ,<br>ಕೊಡಗು. | [signature] 06/9/2016 |
| 8. | ಜಿಲ್ಲಾಧಿಕಾರಿ,<br>ಮೈಸೂರು ಜಿಲ್ಲೆ,<br>ಮೈಸೂರು. | [signature] 6/9/16 |
| 9. | ಜಿಲ್ಲಾಧಿಕಾರಿ,<br>ಚಾಮರಾಜನಗರ ಜಿಲ್ಲೆ,<br>ಚಾಮರಾಜನಗರ. for | [signature] (KAVITHA RAJAR<br>A.C. Kollegal. |
| 10. | ನಿರ್ದೇಶಕರು,<br>ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, | [signature] |
| 11. | ಉಪ ಅರಣ್ಯ ಸಂರಕ್ಷಣಾಧಿಕಾರಿ,<br>ಕೊಡಗು. | [signature] |
| 12. | ಉಪ ಅರಣ್ಯ ಸಂರಕ್ಷಣಾಧಿಕಾರಿ,<br>[illegible] | |

| | | |
|---|---|---|
| 13. | ಉಪ ಅರಣ್ಯ ಸಂರಕ್ಷಣಾಧಿಕಾರಿ,<br>ಚಾಮರಾಜನಗರ | |
| 14. | ಶ್ರೀ ಯು.ಹೆಚ್.ನಾರಾಯಣಸ್ವಾಮಿ,<br>ಸರ್ಕಾರದ ಉಪ ಕಾರ್ಯದರ್ಶಿ,<br>ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ. | |
| 15. | | |
| 16. | | |
| 17. | | |